ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರ. ಜಾ. ವಾ      ದಿನಾಂಕ : DATE : 19/05/2019

# ಹಿರಿಯ ಕಲಾವಿದ ರಾಮದಾಸ ಅದ್ಯಂತಾಯ ನಿಧನ

ಮೈಸೂರು: ಹಿರಿಯ ಕಲಾವಿದ, ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ)ಯ ನಿವೃತ್ತ ಡೀನ್ ರಾಮದಾಸ ಅದ್ಯಂತಾಯ (72) ಅವರು ಶನಿವಾರ ಬೆಂಗಳೂರಿನ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ ಸವಿತಾ ರಾಮದಾಸ, ಪುತ್ರ ಎಂಜಿನಿಯರ್ ಮಾನುಷ್ ಅದ್ಯಂತಾಯ, ಪುತ್ರಿ ವಾಸ್ತುಶಿಲ್ಪಿ ಲಿಪಿ ಅದ್ಯಂತಾಯ ಇದ್ದಾರೆ.



ಮಂಗಳೂರಿನ ಪಟ್ಟಮೊಗರಿನವರಾದ ರಾಮದಾಸ, ಮೈಸೂರಿನಲ್ಲಿ ನೆಲೆಸಿದ್ದರು. ಉಸಿರಾಟದ ತೊಂದರೆಗೆ ಚಿಕಿತ್ಸೆ ಪಡೆಯಲು ಕಳೆದ 15ರಂದು ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು.

1983ರಿಂದ 2005ರವರೆಗೆ ಕಾವಾದಲ್ಲಿ ಬೋಧಕ ಸಿಬ್ಬಂದಿಯಾಗಿ, ಡೀನ್ ಆಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಚಿತ್ರಕಲಾವಿದರಾಗಿದ್ದ ಅವರು ಚಿತ್ರಕಲೆ ಕುರಿತು ಕನ್ನಡದಲ್ಲಿ ಪ್ರಕಟಿಸಿದ 'ದೃಶ್ಯಕಲೆ' ಸಾಕಷ್ಟು ಪ್ರಸಿದ್ಧಿ ಪಡೆದಿದೆ.

ಇವರಿಗೆ 2002ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ವತಿಯಿಂದ ಚಿತ್ರಕಲೆಗಾಗಿ 'ರಾಷ್ಟ್ರ ಪ್ರಶಸ್ತಿ', 2000ದಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ವತಿಯಿಂದ 'ಗೌರವ ಪ್ರಶಸ್ತಿ' ಸಂದಿವೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನೀಡಲಾಗುವ 2012ನೇ ಸಾಲಿನ 'ಕಲಾಗುರು ಡಿ.ವಿ.ಹಾಲಭಾವಿ' ಗೌರವ ಪ್ರಶಸ್ತಿಗೆ ಭಾಜನರಾಗಿದ್ದರು.

ಭಾನುವಾರ ಮಧ್ಯಾಹ್ನ ಮೈಸೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕಕ್ಕೆ: 9481426957.